


# ಶಿಷ್ಯಂದಿರ ತರಬೇತಿ

**ಕಥೆ: ಸ್ವಾಮಿ ವಿಮೂರ್ತಾನಂದ**


**ಚಿತ್ರ : ಪದ್ಮವಾಸನ್**

**1**

ಶ್ರೀ ರಾಮಕೃಷ್ಣರು ತಮ್ಮ ಶಿಷ್ಯಂದಿರಿಗೆ ಅವರವರ ಸ್ವಭಾವಕ್ಕೆ ತಕ್ಕಂತೆ ತರಬೇತಿ ನೀಡುವುದರಲ್ಲಿ ಹೆಸರುವಾಸಿಯಾಗಿದ್ದರು.


**2**

ಶ್ರೀ ರಾಮಕೃಷ್ಣರು ಆಗ ದಕ್ಷಿಣೇಶ್ವರದಲ್ಲಿ ವಾಸಿಸುತ್ತಿದ್ದರು. ಆಗ ಅವರ ಬಗ್ಗೆ ಜನರು ತಿಳಿದುಕೊಳ್ಳಲು ಆರಂಭಿಸಿದ್ದರು. ಅವರು ಆತ್ಮಸಾಕ್ಷಾತ್ಕಾರ ಪಡೆದವರೆಂದೂ ಅವರು ಭಗವಂತನ ಅವತಾರವೆಂದೂ ಹಲವರು ಭಾವಿಸಿದ್ದರು. ಒಂದು ದಿನ ಶ್ರೀರಾಮಕೃಷ್ಣರ ಶಿಷ್ಯನಾಗಿದ್ದ ಯುವಕ ಯೋಗಿನ್ ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದ. ದೋಣಿಯ ಮೂಲಕ ಅವನು ಗಂಗಾನದಿಯನ್ನು ದಾಟುತ್ತಿದ್ದನು. ಅವನೊಂದಿಗೆ ಪ್ರಯಾಣ ಮಾಡುತ್ತಿದ್ದ ಇತರರಲ್ಲಿ ಒಬ್ಬ ಹೀಗೆ ಹೇಳಿದ:




**3**


ಅವರಲ್ಲಿ ವಿಶೇಷತೆಯೇನಿದೆ? ಅವರು ನಮ್ಮ ಹಾಗೇ ಊಟ ಮಾಡುತ್ತಾರೆ, ಚೆನ್ನಾಗಿ ವೇಷಭೂಷಣ ಹಾಕಿಕೊಳ್ಳುತ್ತಾರೆ. ಚಪ್ಪಲಿ ಕೂಡ ಧರಿಸುತ್ತಾರೆ. ತಮಾಷೆ ಮಾಡುತ್ತ ಮಾತನಾಡುತ್ತಾರೆ. ಇಂಥವರು ಹೇಗೆ ಅವತಾರವಾಗುತ್ತಾರೆ? ಇದಕ್ಕಿಂತ ದೊಡ್ಡ ತಮಾಷೆ ಇನ್ನೇನಿದೆ!




ಯುವಕ ಯೋಗಿನ್ ಅದನ್ನು ಕೇಳಿಸಿಕೊಂಡ. ಅವರನ್ನು ತಡೆಯಲು ಸಾಧ್ಯವಾಗದೆ, ಅವನು ಮೌನವಾಗಿದ್ದ. ಅವರ ಮಾತುಗಳು ಶ್ರೀರಾಮಕೃಷ್ಣರನ್ನು ಏನೂ ಮಾಡಲಾರವು ಎಂದು ಅವನು ಭಾವಿಸಿದ್ದ.

**4**

ದಕ್ಷಿಣೇಶ್ವರಕ್ಕೆ ಬಂದು ತಲುಪಿದ ಮೇಲೆ ಅಲ್ಲಿ ನಡೆದ ಘಟನೆಯನ್ನು ಶ್ರೀರಾಮಕೃಷ್ಣರಿಗೆ ವಿವರಿಸಿ ಹೇಳಿದ ಯೋಗಿನ್.




5




ಹೀಗೆ ಶ್ರೀರಾಮಕೃಷ್ಣರು ಅಂಜುಕುಳಿ ಸ್ವಭಾವದ ಯೋಗಿನ್ ಮನಸ್ಸಿಗೆ ಧೈರ್ಯವನ್ನು ತುಂಬಿದರು.

6

ಕೆಲವು ದಿನಗಳ ನಂತರ ಅದೇ ರೀತಿಯ ಇನ್ನೊಂದು ಘಟನೆ ನಡೆಯಿತು. ದೋಣಿಯಲ್ಲಿ ಕೆಲವು ಮಂದಿ ಶ್ರೀರಾಮಕೃಷ್ಣರ ಬಗ್ಗೆ ಕೆಟ್ಟ ಮಾತುಗಳನ್ನಾಡುತ್ತಿದ್ದರು. ಆಗ ಶ್ರೀರಾಮಕೃಷ್ಣರ ಇನ್ನೊಬ್ಬ ಶಿಷ್ಯನಾದ ನಿರಂಜನ ಅಲ್ಲಿದ್ದ.





7

ದೃಢಕಾಯದಿಂದ ಕೂಡಿದ್ದ ನಿರಂಜನನು ಸಿಡಿದು ನಿಂತು, ಆ ರೀತಿ ಮಾತನಾಡಬಾರದೆಂದು ಎಚ್ಚರಿಸಿದ..





8


ಅವರು ಅವನ ಮಾತನ್ನು ಕೇಳಲಿಲ್ಲ. ಆಗ ನಿರಂಜನನು ಜೋರಾಗಿ ದೋಣಿಯನ್ನು ಅಲುಗಾಡಿಸಿದ. ಎಲ್ಲರೂ ಪ್ರಾಣಭಯದಿಂದ ಹೆದರಿಬಿಟ್ಟರು.



9 ದಕ್ಷಿಣೇಶ್ವರಕ್ಕೆ ಬಂದ ಮೇಲೆ ನಿರಂಜನನು ಗುರುಗಳ ಮುಂದೆ ನಡೆದ ಘಟನೆಯನ್ನು ವಿವರಿಸಿದ.






10 ಆಗ ಗುರುಗಳ ಮುಂದಿದ್ದವರೆಲ್ಲ ಯೋಗಿನ್‌ಗೆ ಅವರು ಕೊಟ್ಟ ಉಪದೇಶವನ್ನು ನೆನೆದರು. ಆದರೆ ಈಗ...




11 ಹೀಗೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯಂದಿರ ಸ್ವಭಾವಕ್ಕನುಗುಣವಾಗಿ ತರಬೇತಿ ನೀಡಿದರು — ಅಂಜುಕುಳಿ ಸ್ವಭಾವದವರಿಗೆ ಧೈರ್ಯವನ್ನೂ, ವೀರ ಸ್ವಭಾವದವರಿಗೆ ಮೃದುತ್ವವನ್ನು ಕಲಿಸಿದರು.

12 ಒಂದು ಸಲ ಶ್ರೀರಾಮಕೃಷ್ಣರ ಗೃಹಸ್ಥ ಭಕ್ತರಾಗಿದ್ದ ನಾಗ ಮಹಾಶಯರು ಬೇಲೂರು ಮಠಕ್ಕೆ ದೋಣಿಯಲ್ಲಿ ಬರುತ್ತಿದ್ದರು. ಹಿಂದೆ ಸ್ವಾಮಿ ವಿವೇಕಾನಂದರು ಅವರನ್ನು ಕುರಿತು, ''ಅವರು ತುಂಬಾ ವಿನಯಶಾಲಿ. ಅವರಲ್ಲಿ ಸ್ವಲ್ಪವೂ ಅಪ್ರಾಮಾಣಿಕತೆಯಿಲ್ಲ'' ಎಂದಿದ್ದರು. ಮಠವನ್ನು ದೂರದಿಂದಲೇ ನೋಡುತ್ತ ...




13
ಅವರು ದೋಣಿಯಲ್ಲೇ ಬೇಲೂರು ಮಠಕ್ಕೆ ನಮಸ್ಕರಿಸಿದರು. ಅವರ ಜೊತೆಗೆ ಇದ್ದ ಪ್ರಯಾಣಿಕರು ಅವರನ್ನು ನೋಡಿ ನಕ್ಕರು.
ಇದೇನಿದು ಇಲ್ಲಿಂದಲೇ ಇವನು ಮಠಕ್ಕೆ ನಮಸ್ಕಾರ ಮಾಡುತ್ತಿದ್ದಾನೆ! ಮಠದಲ್ಲಿ ಅಂಥದ್ದೇನಿದೆ?
ಅವರು ಆಸ್ಪತ್ರೆಗಳಲ್ಲಿ ಮೋಚಿ ಕೆಲಸ ಮಾಡುತ್ತಾರೆ. ಮುದುಕರಿಗೆ, ರೋಗಿಗಳಿಗೆ ಅವರು ಊಟ ಮಾಡಿಸಿ ಸೇವೆ ಮಾಡುತ್ತಾರೆ. ಅವರು ದೇವರ ಧ್ಯಾನ ಮಾಡುತ್ತಾರೆಯೆ?
ಅವರು ಸಾಧುಗಳೆ?
14
ಅವರ ಮಾತುಗಳನ್ನು ಕೇಳಿದ ನಾಗಮಹಾಶಯ, ಹಾಗೆ ಸಾಧುಗಳ ಬಗ್ಗೆ ಟೀಕೆ ಮಾಡಬಾರದೆಂದು ಅವರಿಗೆ ತಿಳಿಯಹೇಳಿದರು.
ಸಾಧುಗಳು ಕೇವಲ ಪೂಜೆ ಮತ್ತು ಧ್ಯಾನ ಮಾಡುತ್ತಾರೆ...! ಆದರೆ ಇವರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರಲ್ಲ?... ಅವರು ಹೇಗೆ ಸಾಧುಗಳಾಗುತ್ತಾರೆ.?
15
ನಾಗಮಹಾಶಯರು ಮಾನವನ ಸೇವೆ ಮಾಡುವುದೂ ಕೂಡ ಹೇಗೆ ದೇವರ ಪೂಜೆ ಎಂಬುದನ್ನು ಅವರಿಗೆ ವಿವರಿಸಿ ಹೇಳಿದರು. ಎಷ್ಟು ಹೇಳಿದರೂ ಅವರು ತಮ್ಮ ವಿಚಾರವನ್ನು ಪಟ್ಟು ಬಿಡದೆ ಸಾಧಿಸು ತ್ತಿದ್ದುದನ್ನು ಕಂಡು ಅವರಿಗೆ ಕೋಪ ಬಂತು....
ನೀವು ಯಾವಾಗಲೂ ಪ್ರಾಪಂಚಿಕ ಕೆಲಸಗಳಲ್ಲಿ ಮುಳುಗಿರುತ್ತೀರಿ, ಈ ಸಾಧುಗಳ ಮಹಿಮೆ ನಿಮಗೆ ಹೇಗೆ ಗೊತ್ತಾಗುವುದು? ಅವರು ಭಗವಂತನಿಗಾಗಿ ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದಾರೆ. ಅದು ಎಷ್ಟು ಮಹತ್ವದ ಸಂಗತಿ!
16
ಅವರ ಪ್ರಾಮಾಣಿಕತೆಯನ್ನು ನೋಡಿ ಉಳಿದವರೆಲ್ಲ ಸ್ತಂಭಿತರಾದರು. ಅವರ ಮಾತುಗಳನ್ನು ಅವರು ಸ್ವೀಕಾರ ಮಾಡಲೇಬೇಕಾಯಿತು. ನಂತರ ಅವರೆಲ್ಲ ನಾಗಮಹಾಶಯರನ್ನು ಗೌರವಿಸಿದರು.
ಮುಂದೆ ಬೇಲೂರು ಮಠದಲ್ಲಿ ಸ್ವಾಮೀಜಿಗೆ ಈ ಘಟನೆಯ ಬಗ್ಗೆ ತಿಳಿದು ಬಂತು. ಅವರು ನಾಗಮಹಾಶಯರಿಗೆ ಹೇಳಿದರು...
ನಾಗ ಮಹಾಶಯರೆ, ನೀವು ಸರಿಯಾದ ರೀತಿ ಮಾಡಿದ್ದೀರಿ. ನೀವು ವಿನಯಶಾಲಿಗಳು, ನಿಜ. ಆದರೆ ಅಗತ್ಯವಾದ ಸಂದರ್ಭ ಬಂದಾಗ ಸಿಡಿದು ನಿಂತು ಅವರನ್ನು ಸುಮ್ಮನಾಗಿಸಿದಿರಿ. ಕೆಡುಕನ್ನು ಓಡಿಸುವಾಗ ನಾವು ಸಿಂಹದಂತೆ ಗರ್ಜಿಸಬೇಕು.
'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' – ' ವಜ್ರಕ್ಕಿಂತಲೂ ಕಠೋರ; ಹೂವಿಗಿಂತಲೂ ಮೃದು' — ಭವಭೂತಿ, ('ಉತ್ತರರಾಮಚರಿತ' ದಲ್ಲಿ)